# ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಧಾರವಾಡ



**ಸಮತೆಯೆಡೆಗೆ ನಮ್ಮ ನಡಿಗೆ**

## ಕಪ್ಪು ಉಡುಪಿನಲ್ಲಿ ಮಹಿಳೆಯರು
**‘ಬೆಳಗೋಣ ಸಾಲು ದೀಪ’**

ನಾವು ‘ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ’ದ ಮಹಿಳೆಯರು. ಒಕ್ಕೂಟವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದ್ದು ಕಳೆದ ಆರೇಳು ವರ್ಷಗಳಿಂದ ಕರ್ನಾಟಕದ ನಾನಾ ಕಡೆ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುತ್ತ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಕರ್ನಾಟಕದಾದ್ಯಂತ ಮಹಿಳಾ ಚಳುವಳಿ–ಸಾಹಿತ್ಯ–ಶಿಕ್ಷಣಕ್ಷೇತ್ರದ ಪರಿಣಿತರು–ರಂಗಭೂಮಿ–ಜನಪರ ಹೋರಾಟಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ–ಸಂಘಟನೆಗಳು ಈ ಒಕ್ಕೂಟದೊಂದಿಗಿದ್ದಾರೆ. ಮಹಿಳಾ ಸಂಘಟನೆಗಳು, ದಲಿತ ದಮನಿತರ ಸಂಘಟನೆಗಳು, ಅಂಗನವಾಡಿ–ಪೌರಕಾರ್ಮಿಕರು–ಬಿಸಿಯೂಟ ನೌಕರರು–ಆಶಾ ಕಾರ್ಯಕರ್ತೆಯರು–ಗಾರ್ಮೆಂಟ್ ಮತ್ತು ಪೌರಕಾರ್ಮಿಕರ ಸಂಘಟನೆಗಳು, ಎಡಪಂಥೀಯ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಲೈಂಗಿಕ ಕಾರ್ಯಕರ್ತರು–ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ರಂಗಕರ್ಮಿಗಳು, ಅಕ್ಯಾಡೆಮಿಕ್ ವಲಯದ ಸಮಾನಮನಸ್ಕರೇ ಮೊದಲಾಗಿ ನೂರಾರು ಸಂಘ–ಸಂಸ್ಥೆ–ಸಂಘಟನೆಗಳು ಒಕ್ಕೂಟದ ಭಾಗಿಯಾಗಿವೆ. ಜನಪರ, ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಯಾರು ಬೇಕಾದರೂ ಒಕ್ಕೂಟದ ಭಾಗಿಯಾಗಬಹುದಾಗಿದೆ.

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2020ರ ಮಾರ್ಚ 8, 9ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಧಾರವಾಡದಲ್ಲಿ ಆಚರಿಸಲಿದೆ. ಅದಕ್ಕೆ ಪೂರಕವಾಗಿ ಫೆಬ್ರುವರಿ 1ರಿಂದ ಜಿಲ್ಲೆಯ ಸಮಾನ ಮನಸ್ಕ ವ್ಯಕ್ತಿಗಳು, ಸಂಘಟನೆಗಳ ನೆರವಿನೊಂದಿಗೆ ‘ಕಪ್ಪು ಉಡುಪಿನಲ್ಲಿ ಮಹಿಳೆಯರು’ ಸಂಘಟಿಸಲಾಗಿದೆ. ನಿರಂತರವಾಗಿ ನಡೆಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧ ನಡೆಸುವ ಮೌನ ಪ್ರತಿಭಟನೆಯೇ ‘ಕಪ್ಪು ಉಡುಪಿನ ಮಹಿಳೆಯರು’. ಅದು ಜಗತ್ತಿನಾದ್ಯಂತ ಹಲವಾರು ಮಹಿಳಾ ಗುಂಪುಗಳನ್ನು ಪ್ರೇರೇಪಿಸಿರುವ ಪ್ರತಿರೋಧದ ಒಂದು ವಿಧ. ನಗರ, ಪಟ್ಟಣಗಳಲ್ಲಿನ ಪೇಟೆ, ಬಜಾರು ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಕಪ್ಪು ಉಡುಪು ತೊಟ್ಟು ಒಂದು ಗಂಟೆ ಮೌನವಾಗಿ ಪ್ಲಕಾರ್ಡ್ ಹಿಡಿದು ನಿಂತು ನಡೆಸುವ ಮೌನ ಪ್ರತಿಭಟನೆ ಇದು. ಎಲ್ಲ ಸಮುದಾಯ, ಸಂಸ್ಕೃತಿಗಳ ನಿತ್ಯ ಬದುಕಿನ ಭಾಗವೇ ಆಗಿರುವ ಹಿಂಸೆಯನ್ನು ವಿರೋಧಿಸುವುದು ಅದರ ಧ್ಯೇಯವಾಗಿದೆ.

‘ಕಪ್ಪು ಉಡುಪಿನಲ್ಲಿ ಮಹಿಳೆಯರು’ ಪ್ರಾರಂಭವಾದುದು ತೆಲ್ ಅವಿವ್, ಹೈಫಾ, ಜೆರುಸಲೇಮಿನಲ್ಲಿ. ತಮ್ಮ ಬದುಕುಗಳನ್ನು ದ್ವೇಷದ ರಾಜಕಾರಣ ನಾಶ ಮಾಡುತ್ತಿರುವುದನ್ನು ವಿರೋಧಿಸುತ್ತ ಪ್ಯಾಲೆಸ್ತೇನ್ ಹಾಗೂ ಇಸ್ರೇಲ್ ಮಹಿಳೆಯರು ಇದನ್ನು ಆರಂಭಿಸಿದರು. ಅವರಿಗೆ ಸ್ಫೂರ್ತಿ ನೀಡಿದ್ದು 50ರ ದಶಕದ ದಕ್ಷಿಣ ಆಫ್ರಿಕಾದ ಬ್ಲ್ಯಾಕ್ ಸ್ಯಾಶ್ ಚಳುವಳಿ. ಅಲ್ಲಿನ ಕಪ್ಪು ಮತ್ತು ಬಿಳಿಯ ಮಹಿಳೆಯರಿಬ್ಬರೂ ವರ್ಣದ್ವೇಷದ ವಿರುದ್ಧ ಕಪ್ಪು ಸ್ಕಾರ್ಫ್ ತೊಟ್ಟು ಪ್ರತಿರೋಧಿಸಿದ್ದರು. ಅರ್ಜೆಂಟೀನಾದ ತಾಯಂದಿರು, ಅಜ್ಜಿಯರು ತಲೆಗೆ ಬಿಳಿಯ ಸ್ಕಾರ್ಫ್ ಕಟ್ಟಿಕೊಂಡು 70ರ ದಶಕದ ಮಿಲಿಟರಿ ನಿರಂಕುಶಾಧಿಪತ್ಯಕ್ಕೆ ಬಲಿಯಾದ ಮಕ್ಕಳ ಭಾವಚಿತ್ರಗಳನ್ನು ಹಿಡಿದು ಬ್ಯೂನಸ್ ಅಯರಿಸ್ ನಗರದ ‘ಪ್ಲಾಜಾ ಡಿ ಮೆಯೋ’ ಚೌಕದಲ್ಲಿ ಮೌನ ಮೆರವಣಿಗೆ ನಡೆಸಿದ್ದರು. ನಂತರ ಕಪ್ಪುಉಡುಪಿನ ಮಹಿಳೆಯರ ಪ್ರತಿರೋಧ ಇತರ ದೇಶಗಳಿಗೂ ಹಬ್ಬಿತು. ಯುಗೋಸ್ಲಾವಿಯಾದ

ಬಾಲ್ಕನೀಕರಣ ಸಂದರ್ಭದಲ್ಲಿ ಹೊಸದಾಗಿ ರಚಿಸಲಾದ ಗಡಿಗಳೆಲ್ಲೆಡೆಯಿಂದ ಬಂದ ಮಹಿಳೆಯರು ಒಂದಾಗಿ ಬೋಸ್ನಿಯಾದಲ್ಲಿ ಯುದ್ಧ ಮತ್ತು ಜನಾಂಗೀಯ ಶುದ್ಧತೆಗಾಗಿ ಅತ್ಯಾಚಾರವನ್ನು ಅಸ್ತ್ರದಂತೆ ಬಳಸುತ್ತಿದ್ದುದರ ವಿರುದ್ಧ ಪ್ರತಿಭಟಿಸಿದರು. ಹೀಗೆ ಹಲವಾರು ದೇಶ ಹಾಗೂ ಸಂಸ್ಕೃತಿಗಳಲ್ಲಿನ ವಿಭಿನ್ನ ವಿಷಯಗಳನ್ನು ಇಟ್ಟುಕೊಂಡು; ಮಹಿಳೆಯರ ಮೇಲಿನ ದೌರ್ಜನ್ಯವೂ ಸೇರಿದಂತೆ ಎಲ್ಲ ಯುದ್ಧ, ಘರ್ಷಣೆಗಳು ಹುಟ್ಟುಹಾಕಿದ ಹಿಂಸೆಯನ್ನು ಮೌನಜಾಗೃತಿಯ ಮೂಲಕ ಮಹಿಳೆಯರು ವಿರೋಧಿಸಿದರು.

ಇದರಿಂದ ಸ್ಫೂರ್ತಿಗೊಂಡ ಬೆಂಗಳೂರಿನ 'ವಿಮೋಚನಾ ಮಹಿಳಾ ವೇದಿಕೆ' ಅಂತಹುದೇ ಪ್ರತಿಭಟನೆಯನ್ನು ಮಾರ್ಚ್ 1993ರಲ್ಲಿ ಆರಂಭಿಸಿತು. ಶಾಂತಿಯುತ ಸಹಬಾಳ್ವೆಯ ಸಂಸ್ಕೃತಿ ನಾಶವಾಗಿ, ಇಡೀ ದೇಶವೇ ಕೋಮುವಾದ, ಮೂಲಭೂತವಾದ, ಮತ್ತು ರಾಷ್ಟ್ರೀಯತೆಯ ಹೆಸರಿನಲ್ಲಿ ಹರಿದು ಛಿದ್ರವಾದಾಗ ಅದನ್ನು ಪ್ರತಿಭಟಿಸುವ ಸಾಮೂಹಿಕ ಪ್ರಯತ್ನವಾಗಿ ಇದು ಶುರುವಾಯಿತು. ತದನಂತರ ದೇಶದ ಹಲವು ಪಟ್ಟಣಗಳಿಗೆ ಹಬ್ಬಿ, ಮಹಿಳಾ ಶೋಷಣೆಯನ್ನು ಮುಖ್ಯ ವಿಷಯವಾಗಿಟ್ಟುಕೊಂಡಿತು. ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ, ಹೆಣ್ಣುಭ್ರೂಣ ಹತ್ಯೆ, ಲೈಂಗಿಕ ದೌರ್ಜನ್ಯ, ಅತ್ಯಾಚಾರದಂತಹ ಮಹಿಳೆಯರ ಮೇಲಿನ ಹಿಂಸೆಯನ್ನು ಮೌನವಾಗಿ ವಿರೋಧಿಸಲಾಯಿತು.

2018–19 ಹಿಂಸೆ ರಾರಾಜಿಸಿದ ವರ್ಷ. ಅದೇರೀತಿ ಪ್ರತಿಭಟನೆಗಳು ವ್ಯಾಪಕವಾಗಿ ನಡೆದ, ಸಾರ್ವಜನಿಕ ಬೀದಿಗಳನ್ನು ಪ್ರತಿರೋಧ, ಪ್ರತಿಭಟನೆಯ ನೆಲೆಯಾಗಿ ಮರುಸ್ಥಾಪಿಸಿಕೊಳ್ಳಲು ಹೋರಾಡಿದ ವರ್ಷವೂ ಹೌದು. ಜೊತೆಗೆ ಮಹಿಳೆಯರು, ದಲಿತದಮನಿತರು, ಆದಿವಾಸಿಗಳು, ಅಲ್ಪಸಂಖ್ಯಾತ ಸಮುದಾಯಗಳು, ಯುವ ಜನತೆ, ಮಕ್ಕಳು, ಬಡವರು, ನಿಸ್ಸಹಾಯಕರು, ಲೈಂಗಿಕ ಅಲ್ಪಸಂಖ್ಯಾತರು ತಮ್ಮ ಮಾನವ ಹಕ್ಕುಗಳು ಮತ್ತು ಘನತೆಗಾಗಿ ಹೋರಾಡಿದ ವರ್ಷವೂ ಹೌದು. ಅವರೆಲ್ಲರ ಸಾಂಘಿಕ ಪ್ರತಿರೋಧದೊಂದಿಗೆ ಸಹಮತ ತೋರುತ್ತ ಧಾರವಾಡ ಜಿಲ್ಲೆಯಲ್ಲಿ ಕಪ್ಪು ಉಡುಪಿನ ಮಹಿಳೆಯರ ಮೌನ ಪ್ರತಿಭಟನೆ ನಡೆಯಲಿದೆ. ಮಹಿಳೆಯರ ದೇಹಗಳ ಮೇಲೆ ಹೂಡಿರುವ ಅಪಮಾನಕರ ಕದನವನ್ನು ವಿರೋಧಿಸಿ ನಮ್ಮ ಘನತೆಯನ್ನು ಮರುಸ್ಥಾಪಿಸಿಕೊಳ್ಳಲು ನಾವೆಲ್ಲರೂ ಒಗ್ಗೂಡಿ ಮೌನವಾಗಿ ನಿಲ್ಲುತ್ತೇವೆ. ಧಾರವಾಡ ಜಿಲ್ಲೆಯ ಪ್ರತಿ ತಾಲೂಕಿನಲ್ಲಿ ಫೆಬ್ರುವರಿ 1ನೇ ತಾರೀಖಿನಿಂದ ಪ್ರತೀ ಶುಕ್ರವಾರ 5.30 ರಿಂದ 7 ಗಂಟೆಯವರೆಗೆ ತಾಲೂಕು ಕೇಂದ್ರಗಳ ಮುಖ್ಯಚೌಕಗಳಲ್ಲಿ ಮೌನಜಾಗೃತಿ ನಡೆಸಲಾಗುತ್ತಿದೆ.

'ಕಪ್ಪು ಉಡುಪಿನಲ್ಲಿ ಮಹಿಳೆಯರು' ಕಾರ್ಯಕ್ರಮದಲ್ಲಿ ನಮ್ಮೊಂದಿಗಿರಲು ಬನ್ನಿ. ನಿಮ್ಮ ಪ್ರತಿರೋಧವನ್ನು ಅಭಿವ್ಯಕ್ತಿಸಲು ಕಪ್ಪು ಉಡುಪು ಧರಿಸಿ ಬನ್ನಿ. ಸೂರ್ಯ ಮುಳುಗುವಾಗ ಒಟ್ಟಾಗಿ ದೀಪ ಹಚ್ಚೋಣ. ಹಿಂಸೆ ಮತ್ತು ದ್ವೇಷದ ರಾಜಕಾರಣದಲ್ಲಿ ಮನೆ ಮಾಡಿರುವ ಕಗ್ಗತ್ತಲೆಯನ್ನು ಮಣಿಸಿ ಘನತೆ, ಶಾಂತಿ ಮತ್ತು ಪ್ರೀತಿಯ ರಾಜಕಾರಣದ ದೀಪ ಬೆಳಗಿಸೋಣ.

ಕೊನೆಯಿರದ ವಿಶಾಲ ಬಯಲಿನಲಿ
ಚದುರಿದ ಚುಕ್ಕಿಗಳ ಒಟ್ಟು ಮಾಡಿ
ಕಗ್ಗತ್ತಲಾಳದ ಎದೆಗಳಲಿ ಸುರಿಯೋಣ ಬನ್ನಿ,
ಕೊನೆಯಿರದ ಕತ್ತಲಳಿಸಿ ಬೆಳಗಾಗಿಸಲು
ಕೋಟಿಕೋಟಿ ಸಾಲುದೀಪ ಹಚ್ಚಿ ನಿಲ್ಲೋಣ ಬನ್ನಿ,
ಪ್ರೀತಿ ಒರತೆ ಒಣಗದಂತಿರಿಸೋಣ ಬನ್ನಿ,
ಜೀವಪ್ರೀತಿಯ ಸಂಗಾತಿಗಳೆಲ್ಲ ಬನ್ನಿ..

ಸುನಂದಾ ಕಡಮೆ, ಶಾರದಾ ಗೋಪಾಲ, ಲಿನೆಟ್ ಡಿಸಿಲ್ವ, ಶಾರದಾ ಪಾಟೀಲ, ರಜನಿ ಗರುಡ, ಬಸಂತಿ ಹಪ್ಪಳದ, ಅಕ್ಕಮಹಾದೇವಿ ಅರಗುಂಜಿ, ಹೇಮಾ ಪಟ್ಟಣಶೆಟ್ಟಿ, ರಾಜೇಶ್ವರಿ ಜೋಶಿ, ಭಾರತಿ ಮತ್ತು ಒಕ್ಕೂಟದ ಬಳಗ.

ಸಂಪರ್ಕ: 9902840033, 9901469338, 9449207919, 8277026286.